# ಓಲಾ ಆಫ್ರಿಕಾ... ಒಬ್ರಿಗಾಡೋ!

ಆಫ್ರಿಕಾದ ಪುಟ್ಟ ದೇಶ ಮೊಝಾಂಬಿಕ್‌ನ ಗೊರೊಂಗೊಸ ರಾಷ್ಟ್ರೀಯ ಉದ್ಯಾನ ವನ್ಯಸಂಪತ್ತಿನ ಅಕ್ಷಯಪಾತ್ರೆ. ನೂರಾರು ಸಿಂಹಗಳು, ಸಾವಿರಾರು ಆನೆಗಳು ಅಲ್ಲಿನ ಪರಿಸರದಲ್ಲಿವೆ.

■ ನರಸಿಂಹ ಸ್ವಾಮಿ ಎನ್.




ದಕ್ಷಿಣ ಪೂರ್ವ ಆಫ್ರಿಕಾದಲ್ಲಿರುವ ಒಂದು ಪುಟ್ಟ ದೇಶ ಮೊಝಾಂಬಿಕ್. ಬೆಂಗಳೂರಿನಿಂದ ದುಬೈ–ಜೋಹಾನ್ಸ್‌ಬರ್ಗ್ ಮೂಲಕ ಅಲ್ಲಿಗೆ ಒಟ್ಟು 28 ಗಂಟೆಗಳ ಪ್ರಯಾಣ. ದುಬೈನಿಂದ ಜೋಹಾನ್ಸ್‌ಬರ್ಗ್‌ಗೆ ಸುಮಾರು ಎಂಟು ಗಂಟೆಯ ದಾರಿ. ಮೊಝಾಂಬಿಕ್‌ನ ಆಕರ್ಷಣೆಗಳಲ್ಲೊಂದು, 'ಗೊರೊಂಗೊಸ' ರಾಷ್ಟ್ರೀಯ ಉದ್ಯಾನವನ.

'ಗೊರೊಂಗೊಸ' ನಮ್ಮ ನಾಗರಹೊಳೆ, ಬಂಡೀಪುರ ಇದ್ದ ಹಾಗೆ. ಸುಮಾರು ನಾಲ್ಕು ಸಾವಿರ ಚ.ಕಿ.ಮೀ. ವಿಸ್ತೀರ್ಣದ ಆ ಉದ್ಯಾನದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಆನೆಗಳು, ಐನೂರಕ್ಕೂ ಹೆಚ್ಚು ಸಿಂಹಗಳಿವೆಯಂತೆ. ಮ್ವಾಮಿ (Mwani) ಭಾಷೆಯಲ್ಲಿ ಗೊರೊಂಗೊಸ ಅಂದರೆ 'ಆಪತ್ತಿನ ಅಡಗುತಾಣ' ಎಂದರ್ಥ. ಆ ವಿಶಿಷ್ಟ ತಾಣಕ್ಕೆ ಗೆಳೆಯನೊಂದಿಗೆ ಹೊರಟೆ. ಗೊರೊಂಗೊಸ ಹಳ್ಳಿಗೆ ಬಂದಾಗ (ಕಾಡಿನಲ್ಲಿನ ಗ್ರಾಮ) ಸಂಜೆ ನಾಲ್ಕರ ಸಮಯ. ಆ ವೇಳೆಯಲ್ಲಿ ಯಾವುದೇ ಸಫಾರಿ ಇರಲಿಲ್ಲವಾದ್ದರಿಂದ ಅಲ್ಲಿಯೇ ಒಂದು ಚಿಕ್ಕ ಹೋಟೆಲ್‌ನಲ್ಲಿ ಉಳಿದೆವು.

ಬೆಳಗ್ಗೆ ಸಫಾರಿಗೆ ಹೊರಟೆವು. ಅದೊಂದು ಸುಸ್ಥಿತಿಯಲ್ಲಿದ್ದ, ನೋಡಲೂ ಚೆನ್ನಾಗಿದ್ದ ತೆರೆದ ಜೀಪ್. ನಮ್ಮ ದೇಶದ ಯಾವುದೇ ಸಫಾರಿಯಲ್ಲೂ ಅಷ್ಟೊಂದು ಉತ್ತಮವಾದ ಜೀಪನ್ನು ನಾನು ನೋಡಿರಲಿಲ್ಲ. ನಮಗೆ ದೊರೆತ ಆಂಟೋನಿಯೋ ಹೆಸರಿನ ಗೈಡ್ ಅರಳು ಹುರಿದಂತೆ ಮಾತನಾಡುತ್ತಿದ್ದ, ಆತ ಇಂಗ್ಲಿಷ್ ಬಲ್ಲವನಾಗಿದ್ದ; ಆವರೆಗೆ ನಾವು ಕಂಡು ಕೇಳರಿಯದ ಪಕ್ಷಿಗಳ ದರ್ಶನ ಮಾಡಿಸಿದ. ದಾರಿಯಲ್ಲಿ ಕಂಡ 'ಹಳದಿ ಮರ'ಗಳ ಬಳಿ ಜೀಪ್ ನಿಲ್ಲಿಸಿ – ಕಾಂಡ, ರೆಂಬೆ ಕೊಂಬೆ ಎಲ್ಲವೂ ಹಳದಿಯಾಗಿದ್ದ ಮರವನ್ನು ತೋರಿಸಿದ. ಆಗ ನನಗೆ ನೆನಪಾದದ್ದು, ಇಲ್ಲಿಗೆ ಬರುವ ಮುನ್ನ ಬೆಂಗಳೂರಿನಲ್ಲಿ ನಾನು ಚುಚ್ಚಿಸಿಕೊಂಡ 'ಹಳದಿ ಜ್ವರ'ವನ್ನು ನಿರೋಧಿಸುವ ಇಂಜೆಕ್ಷನ್.

ನನಗೋ ಪಕ್ಷಿಗಳ ಗಂಧ ಅಷ್ಟಕ್ಕಷ್ಟೆ,






ಗೊರೊಂಗೊಸ ರಾಷ್ಟ್ರೀಯ ಉದ್ಯಾನದ ಮುಂದೆ ಲೇಖಕ